ದಿನಾಂಕಃ 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಎ.ಎಸ್. ವಕೀಲರಿಂದ:**

ನಾನು 10 ನೇ ತರಗತಿವರೆಗೆ ಅಭ್ಯಾಸ ಮಾಡಿರುತ್ತೇನೆ. 1, 2, 4 ರಿಂದ 7 ನೇ ಪ್ರತಿವಾದಿಯರು ನನ್ನ ತಾಯಿ, ಸಹೋದರ – ಸಹೋದರಿಯರು. ನನ್ನ ಜಮೀನು ಸರ್ವೆ ನಂ.512/3 ಬಿ, ಕ್ಷೇತ್ರ 4 ಎಕರೆ - 10 ಗುಂಟೆ, ಸರ್ವೆ ನಂ.513/3 ಬಿ ಕ್ಷೇತ್ರ 4 ಎ-10 ಗುಂ ಮತ್ತು ಸರ್ವೆ ನಂ.452/3 ಬಿ ಕ್ಷೇತ್ರ 1 ಎ-10 ಗುಂ ಇರುತ್ತದೆ. ವಾದಿಯರ ಜಮೀನುಗಳು ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಇರುತ್ತವೆ. ವಾದಿಯರ ಜಮೀನು ಸರ್ವೆ ನಂ.512/3 ಕ ಕ್ಷೇತ್ರ 4 ಎ-10 ಗುಂ, ಸರ್ವೆ ನಂ.513/3 ಕ ಕ್ಷೇತ್ರ 4 ಎ-10 ಗುಂ ಮತ್ತು ಸರ್ವೆ ನಂ.452/3 ಕ ಕ್ಷೇತ್ರ 1 ಎ-10 ಗುಂ ಇರುತ್ತದೆ. ನಾನು ಆ ಕುರಿತು ಉತಾರೆಗಳನ್ನು ನೋಡಿರುವುದಿಲ್ಲ. ವಾದಿಯರು ತಮ್ಮ ಆಸ್ತಿಗಳನ್ನು ನಾವು ಅತೀಕ್ರಮಣ ಮಾಡಿರುತ್ತೇವೆ ಎಂದು ಈ ದಾವೆ ಸಲ್ಲಿಸಿರುತ್ತಾರೆ. ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ನಾನು ಓದಿರುತ್ತೇನೆ.

ವಾದಿಯರು ಈ ದಾವೆಯನ್ನು ದಿನಾಂಕಃ 18-12-2018 ರಂದು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾವು ದಾವಾ ಆಸ್ತಿಗಳನ್ನು ಅತೀಕ್ರಮಣ ಮಾಡಲು ಪ್ರಯತ್ನ ಮಾಡಿರುತ್ತೇವೆ ಎಂದು ಹೇಳಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ಇಲಾಖೆಯವರು ದಾವಾ ಆಸ್ತಿಯನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ, ಅದು ಸರ್ವೆ ಇಲಾಖೆಯವರು ತಯಾರಿಸಿದ ದಾಖಲೆ ಎಂದು ಗುರುತಿಸಿ ಒಪ್ಪಿಕೊಂಡಿರುವುದರಿಂದ ನಿಪಿ-21 ಎಂದು ಗುರುತಿಸಲಾಯಿತು. ನಿಪಿ-21 ರ ದಾಖಲೆ ದಿನಾಂಕಃ 01-08-2019 ರಂದು ತಯಾರಿಸಿರುತ್ತಾರೆ ಎಂದರೆ ಸರಿ. ದಾವೆ ಸಲ್ಲಿಸುವಾಗ ನಾವು ದಾವಾ ಆಸ್ತಿಯ ಯಾವುದೇ ಭಾಗ ಅತೀಕ್ರಮಣ ಮಾಡಿರುವುದಿಲ್ಲ, ಆದರೆ ನಿಪಿ-21 ರ ದಾಖಲೆಯ ಪ್ರಕಾರ ದಾವಾ ಆಸ್ತಿಯನ್ನು ಅತೀಕ್ರಮಣ ಮಾಡಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-21 ರಲ್ಲಿ ಜಮೀನು ಸರ್ವೆ ನಂ.512, 513 ಮತ್ತು 452 ತೋರಿಸಿರುತ್ತಾರೆ ಎಂದರೆ ಸರಿ. ನಿಪಿ-21 ರ ಪ್ರಕಾರ ನಾವು ವಾದಿಯರ ಆಸ್ತಿಯಲ್ಲಿ ಅತೀಕ್ರಮಣ ಮಾಡಿರುವುದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-21 ರ ವಿರುದ್ಧ

ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ದಾವಾ ಆಸ್ತಿಯನ್ನು ನಾವು ಅತೀಕ್ರಮಣ ಮಾಡಿರುವ ಕುರಿತು ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ವಾದಿಯರ ಆಸ್ತಿಯನ್ನು ನಾವು ಅತೀಕ್ರಮಣ ಮಾಡಿರುತ್ತೇವೆ, ಅವರು ಸ್ವಾಧೀನದಲ್ಲಿಲ್ಲ ಎಂದು ಪಾಟೀ ಸವಾಲಿನಲ್ಲಿ ಪ್ರಶ್ನೆಗಳನ್ನು ಕೇಳುವಂತೆ ಮಾಹಿತಿ ನೀಡಿರಲಿಲ್ಲ. ನಾವು ನೀಡಿದ ಮಾಹಿತಿಯ ಪ್ರಕಾರ ನಮ್ಮ ಪರ ವಕೀಲರು ಪಿಡಬ್ಲ್ಯೂ-1 ರಿಗೆ ಪಾಟೀ ಸವಾಲು ಮಾಡಿರುತ್ತಾರೆ. ಪಿಡಬ್ಲ್ಯೂ-1 ರ ಪಾಟೀ ಸವಾಲಿನ ಸಂಗತಿಗಳನು ನಾನು ತಿಳಿದುಕೊಂಡಿರುತ್ತೇನೆ. ಪಿಡಬ್ಲ್ಯೂ-1 ರ ಪಾಟೀ ಸವಾಲಿನಲ್ಲಿ ನಮ್ಮ ಪರ ವಕೀಲರು ದಾವಾ ಆಸ್ತಿಯನ್ನು ಅತೀಕ್ರಮಣ ಮಾಡಿರುತ್ತೇವೆ ಎಂದು ಕೇಳಿದ ಪ್ರಶ್ನೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ಕುರಿತು ನಮ್ಮ ವಕೀಲರನ್ನು ಪ್ರಶ್ನೆ ಮಾಡಿರುವುದಿಲ್ಲ.

ವಾದಿಯರಿಗೆ ತಮ್ಮ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಮತ್ತು ನಮ್ಮ ಆಸ್ತಿಗಳು ಸಹ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿ. ವಾದಿಯರ ಜಮೀನುಗಳ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಮಾಲೀಕರು ವಾದಿಯರೇ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳ ಮೇಲೆ ನಮಗೆ ಯಾವುದೇ ಅಧಿಕಾರ ವ ಹಕ್ಕು ಇರುವುದಿಲ್ಲ ಎಂದರೆ ಸರಿ. ವಾದ ಪತ್ರದೊಂದಿಗೆ ಸಲ್ಲಿಸಿದ ನಕಾಶೆಯನ್ನು ನಾನು ನೋಡಿರುತ್ತೇನೆ. ವಾದ ಪತ್ರದ ನಕಾಶೆಯಲ್ಲಿ ತೋರಿಸಿದ ಬಿಸಿಜಿಎಚ್ ಎಂದು ಗುರುತಿಸಿದ ಜಮೀನುಗಳು ನಮಗೆ ಸೇರಿದ ಜಮೀನುಗಳು ಎಂದರೆ ಸರಿ. ನಮ್ಮ ಜಮೀನುಗಳ ಪಶ್ಚಿಮ ದಿಕ್ಕಿಗೆ ಎಬಿಸಿಡಿ ಎಂದು ಗುರುತಿಸಿದ ಆಸ್ತಿಗಳು ವಾದಿಯರ ಆಸ್ತಿಗಳು ಎಂದರೆ ಸರಿ. ಸದರಿ ನಕಾಶೆಯಲ್ಲಿ ಹೇಳಿದ ಸಂಗತಿಗಳು ನಿಜ ಇರುತ್ತವೆ ಎಂದರೆ ಸರಿಯಲ್ಲ. ಸದರಿ ಕಚ್ಚಾ ನಕಾಶೆ ಯಾವ ಭಾಗ ತಪ್ಪಿನಿಂದ ಕೂಡಿದೆ ಎಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸರಿಯಾದ ನಕಾಶೆಯನ್ನು ತೋರಿಸುವ ಸಲುವಾಗಿ ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ. ವಾದ ಪತ್ರದ ಕಚ್ಚಾ ನಕಾಶೆ ಸುಳ್ಳಿನಿಂದ ಕೂಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯರು ಆ ಮೊದಲು ದಾವೆ ಸಲ್ಲಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಮ್ಮ ಪರವಾಗಿ ಆದೇಶವಾಗಿರುತ್ತದೆ. ವಾದಿಯರು ಮೊದಲು ಅತಿಕ್ರಮಣದ ವಿಷಯವಾಗಿ ದಾವೆ ಸಲ್ಲಿಸಿದ್ದರು, ನಾವು ಅತಿಕ್ರಮಣ ಮಾಡಿಲ್ಲ ಎಂದು ದಾವೆ ಹಾಕಿದ್ದೆವು. ಸದರಿ ಪ್ರಕರಣಗಳ ನಂಬರ ಹೇಳಲು ಬರುವುದಿಲ್ಲ. ತೀರ್ಪಿನ ದಾಖಲೆ ಹಾಜರಪಡಿಸಿರುತ್ತೇವೆ, ಆದರೆ ಏನು ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಅತಿಕ್ರಮಣ ಮಾಡದಂತೆ ಮನಾಯಿ ಆದೇಶ ಕೋರಿ ವಾದಿಯರು ಮೊದಲು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ವಾದಿಯರ ತಂದೆಯ ಪರವಾಗಿ ಆದೇಶವಾಗಿತ್ತು ಎಂದರೆ ಸರಿಯಲ್ಲ. ವಾದಿಯರ ತಂದೆ ಮೃತಪಟ್ಟ ನಂತರ ಪುನಃ ನಾವು ದಾವಾ ಆಸ್ತಿಯನ್ನು ಅತಿಕ್ರಮಣ ಮಾಡಲು ಪ್ರಯತ್ನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯರ ಜಮೀನಿನ ಮಧ್ಯೆ ಇರುವ ಬದುವನ್ನು ಹಾಳು ಮಾಡಲು ಪ್ರಯತ್ನ ಮಾಡಿದಾಗ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ನಾವು ವಾದಿಯರ ಜಮೀನು ಕಬ್ಜಾ ಮಾಡಿ ಸ್ವಾಧೀನದಲ್ಲಿ ಇರುವುದಿಲ್ಲ.

ವಾದಿಯರು ಸಲ್ಲಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಿಪಿ-11 ಮತ್ತು 12 ರ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಗಳನ್ನು ಸರಕಾರದವರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವಾದಿಯರ ಜಮೀನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.06.16 17:37:46 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ